# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | | 1090 |
| ಮಾನ್ಯ ಸದಸ್ಯರ ಹೆಸರು | | ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ಸಚಿವರು | | ಉನ್ನತ ಶಿಕ್ಷಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | | 17.03.2025 |
| **ಪ್ರಶ್ನೆ** | | **ಉತ್ತರ** |
| ಅ) | ಯು.ಜಿ.ಸಿ. ಪ್ರಾಯೋಜಿಸಿರುವ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರಗಳು ರಾಜ್ಯದ ಎಷ್ಟು ವಿಶ್ವವಿದ್ಯಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿದೆ; | ರಾಜ್ಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಯು.ಜಿ.ಸಿ. ಪ್ರಾಯೋಜಿಸಿರುವ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. |
| ಆ) | ಈ ಕೇಂದ್ರಗಳ ಪರಿನಿಯಮಾವಳಿಗಳನ್ನು (Statute) ಸರ್ಕಾರ ಅಂಗೀಕರಿಸಿದೆಯೇ; ಇಲ್ಲವಾದರೆ ಕಾರಣವೇನು; | ಮೈಸೂರು ವಿಶ್ವವಿದ್ಯಾನಿಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಯು.ಜಿ.ಸಿ. ಪ್ರಾಯೋಜಿಸಿರುವ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರಗಳ ಪರಿನಿಯಮಾವಳಿಗಳಿಗೆ ಸಂಬಂಧಿಸಿದಂತೆ ಸರ್ಕಾರವು ಕೈಗೊಂಡಿರುವ ಕ್ರಮದ ಕುರಿತು ಮಾಹಿತಿಯು ಈ ಕೆಳಕಂಡಂತಿದೆ.<br><br>• **<u>ಮೈಸೂರು ವಿಶ್ವವಿದ್ಯಾನಿಲಯ:-</u>**<br><br>ಸರ್ಕಾರದ ಪತ್ರ ಸಂಖ್ಯೆ: ಇಡಿ 18 ಯುಎಂವಿ 2020 ದಿನಾಂಕ: 29.11.2023ರ ಪತ್ರದಲ್ಲಿ "ಸಾಮಾಜಿಕ ಹಿಂದುಳಿದ ಜನರ ಸಮಸ್ಯೆಗಳನ್ನು ಅಧ್ಯಯನ ಮಾಡುವ ಉದ್ದೇಶವಿದ್ದಲ್ಲಿ, ಪಿ.ಹೆಚ್.ಡಿ. ಸಂಶೋಧನೆ ಮಾಡುವ ಮೂಲಕ ವಿಶ್ವವಿದ್ಯಾಲಯದ ಉದ್ದೇಶವನ್ನು ಈಡೇರಿಸಿಕೊಳ್ಳುವಂತೆ ತಿಳಿಸುತ್ತಾ, ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರಕ್ಕೆ ಯು.ಜಿ.ಸಿ.ಯು ತನ್ನ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ Plan to Plan Basis ಆಧಾರದ ಮೇಲೆ ಸದರಿ ಕೇಂದ್ರವು ಸಾಧಿಸುವ ಪ್ರಗತಿಯನುಸಾರ ಯು.ಜಿ.ಸಿ.ಯು ನೀಡಿರುವ ಸಹಾಯಾನುಧಾನದಿಂದಲೇ ನಡೆಸಬಹುದಾಗಿದ್ದು, ಈ ಕೆಂದ್ರವನ್ನು ಶಾಶ್ವತ ಕೇಂದ್ರವನ್ನಾಗಿ ಅನುಮೋದನೆ ನೀಡಲು ಸರ್ಕಾರದಿಂದ ಯಾವುದೇ ಭರವಸೆ, ಸಹಾಯಾನುದಾನ, ಹುದ್ದೆಗಳ ಸೃಜನೆಗೆ ಸಹಮತಿ ಸಾಧ್ಯವಿಲ್ಲವೆಂದು ಕರಡು ಪರಿನಿಯಮಗಳನ್ನು ಮೈಸೂರು ವಿಶ್ವವಿದ್ಯಾಲಯಕ್ಕೆ ಅನುಮೋದನೆ ರಹಿತವಾಗಿ ಹಿಂದಿರುಗಿಸಲಾಗಿದೆ."<br><br>• **<u>ಬೆಂಗಳೂರು ವಿಶ್ವವಿದ್ಯಾಲಯ:-</u>**<br><br>ಸರ್ಕಾರದ ಪತ್ರ ದಿನಾಂಕ: 13.05.2016ರ ಪತ್ರದಲ್ಲಿ "The University of Bangalore being Autonomous body has discretionary power to decide whether to continue the centre |

| | | |
|---|---|---|
| | | or not. Further, University of Bangalore can also arrange financial assistance by its own resources. As such I am directed to request you to meet out the expenditure from own resources of University of Bangalore, for making the Centre for study of Social exclusion and inclusive Policy full pledged unit and facilitating to cater to the activities of the said Centre" |
| ಇ) | ಇಲ್ಲಿನ ಬೋಧಕ ಸಿಬ್ಬಂದಿಗಳನ್ನು ವೇತನ ಅನುದಾನಕ್ಕೆ ಒಳಪಡಿಸಲು ಕೈಗೊಂಡಿರುವ ಕ್ರಮಗಳೇನು? | ಇಲ್ಲಿನ ಬೋಧಕ ಸಿಬ್ಬಂದಿಗಳನ್ನು ವೇತನ ಅನುದಾನಕ್ಕೆ ಒಳಪಡಿಸಲು ಆರ್ಥಿಕ ಇಲಾಖೆಯು ಸಹಮತಿಸಿರುವುದಿಲ್ಲ. |
| ಈ) | ಸರ್ಕಾರದ ವತಿಯಿಂದ ಉದ್ಯೋಗ ಮೇಳವನ್ನು ಏರ್ಪಡಿಸಿದೆಯೇ (ಮಾಹಿತಿ ನೀಡುವುದು) | ಉನ್ನತ ಶಿಕ್ಷಣ ಇಲಾಖೆಯಿಂದ ಯಾವುದೇ ಉದ್ಯೋಗ ಮೇಳವನ್ನು ಏರ್ಪಡಿಸಿರುವುದಿಲ್ಲ. |

ಸಂಖ್ಯೆ: ಇಡಿ 103 ಯುಎನ್ಇ 2025

(ಡಾ: ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು